ನುಂಗಿಕೊಂಡಿತು. ಅದನ್ನು ಕಂಡ ಶ್ರೀಧರಸ್ವಾಮಿಗಳಿಗೆ ಎಲ್ಲರನ್ನೂ ಕಾಪಾಡುವ, ಎಲ್ಲರ ಯೋಗಕ್ಷೇಮವನ್ನೂ ನೋಡಿಕೊಳ್ಳುವ ವ್ಯವಸ್ಥೆಯೊಂದನ್ನು ಭಗವಂತನು ಪೂರ್ವಭಾವಿಯಾಗಿಯೇ ರೂಪಿಸಿರುತ್ತಾನೆ ಎಂಬ ಸತ್ಯದ ಅರಿವಾಯಿತು. ಅದರ ಫಲವಾಗಿ ಶಿಶುಮೋಹವನ್ನು ತೊರೆದು ಗೃಹತ್ಯಾಗ ಮಾಡಿಬಿಟ್ಟರು. ಆ ಬಳಿಕ ಬಂಧುಗಳು ಬಂದು ಮಗುವನ್ನು ಕಾಪಾಡಿಕೊಂಡರು.

**ಸದ್ಗುಣಗಳ ಭಂಡಾರ:** ಸುಬೋಧಾನಂದರಾದರೋ ಸದ್ಗುಣಗಳ ಭಂಡಾರವೇ ಆಗಿದ್ದರು. ತಮ್ಮ ಅಪೂರ್ವವಾದ ಗುರುಭಕ್ತಿಯಿಂದ ಎಂತಹ ಸಂಕಟಗಳನ್ನಾದರೂ ಗೆದ್ದುಬಿಡ ಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು. ವೃಂದಾವನದ ಯಾತ್ರೆಯ ಕಾಲದಲ್ಲಿ ತರುಣಿಯೊಬ್ಬಳು ಕಾಮಪರವಶಳಾಗಿ ಹಿಂದಿನಿಂದ ಬಂದು ಸುಬೋಧಾನಂದರ ಮೇಲೆ ಧಾಳಿ ಮಾಡಿದಳು. ಬೆಚ್ಚಿಬೆದರಿದ ಜಿಂಕೆಯಂತಾದ ಸುಬೋಧಾನಂದರು "ಕಾಪಾಡು ಬಾ ಸದ್ಗುರುವೇ" ಎಂದು ಕೂಗಿ ಮೊರೆಯಿಟ್ಟರು. ತಕ್ಷಣವೇ ಆ ತರುಣಿಯು ಪ್ರಜ್ಞೆತಪ್ಪಿ ನೆಲದ ಮೇಲೆ ಉರುಳಿಕೊಂಡಳು. ಸುಬೋಧಾನಂದರು ಬೇಗನೆ ಅಲ್ಲಿಂದ ಮರೆಯಾದರು. ಆ ಪ್ರವಾಸಕಾಲದಲ್ಲಿಯೇ ಫಲ್ಗು ಎಂಬ ನದಿಯನ್ನು ದಾಟಬೇಕಾಗಿ ಬಂತು. ಅವರಿಗೆ ಈಜು ಬರುತ್ತಿರಲಿಲ್ಲ. ಹೆಚ್ಚೇನೂ ಆಳವಿರಲಿಲ್ಲವಾದ್ದರಿಂದ ಹಾಗೆಯೇ ದಾಟುತ್ತಿದ್ದರು. ಆದರೆ ಅಷ್ಟರಲ್ಲಿಯೇ ಮೇಲಿ ನಿಂದ ಪ್ರವಾಹವು ಉಕ್ಕಿಬಂದು ಸುಬೋಧಾನಂದರು ಜಲ ಸಮಾಧಿಯಾಗುವ ಪರಿಸ್ಥಿತಿ ಒದಗಿ ಬಂದಿತು. ಆಗಲೂ ಗುರುಸ್ಮರಣೆಯೇ ಅವರನ್ನು ಕಾಪಾಡಿತು. ಪರಮಹಂಸರೇ ಪ್ರತ್ಯಕ್ಷರಾಗಿ ಅವರ ಕೈಹಿಡಿದು ಎಳೆದೊಯ್ದು, ಆಚೆಯ ದಡಕ್ಕೆ ಮುಟ್ಟಿಸಿದರು.

ಸುಬೋಧಾನಂದರು ಸರಳತೆಯ, ಸಹಜತೆಯ ನಿರಾಡಂಬರತೆಯ, ನಿರಹಂಕಾರದ ಪ್ರತಿಮೂರ್ತಿಯಾಗಿದ್ದರು. ಮಠದ ವಾತಾವರಣದಲ್ಲಿ ಉಂಟಾಗುತ್ತಿದ್ದ ಬಿಗುವಿನ ವಾತಾವರಣವನ್ನು ತಾವು ಸ್ನೇಹಸೇತುವಾಗಿದ್ದುಕೊಂಡು ತಿಳಿಗೊಳಿಸಿಕೊಡುತ್ತಿದ್ದರು. ರೋಗಪೀಡಿತ ಗೃಹಸ್ಥರ ಮನೆಗಳಿಗೂ ಹೋಗಿ ಅವರ ಸೇವೆಮಾಡಿ ಬರುತ್ತಿದ್ದರು.

**ಮಹಾಸಂಘದ ಮೇಲೆ ಶ್ರೀರಾಮಕೃಷ್ಣರ ಕೃಪೆಯಿರಲಿ:** ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಸುಬೋಧಾನಂದರು ಮಧುಮೇಹ, ಅತಿಸಾರ, ಕ್ಷಯ ಮುಂತಾದ ಕಾಯಿಲೆಗಳಿಂದ ಸಂಕಟಪಟ್ಟರು. ಆರೋಗ್ಯಧಾಮಗಳಿಗೆ ಹೋಗಿಬನ್ನಿ ಎಂದರೆ "ಬೇಲೂರುಮಠದ ಹೊರತು ನನಗೆ ಬೇರಾವ ತಾಣವೂ ಈಗ ರುಚಿಸುತ್ತಿಲ್ಲ. ಇಲ್ಲಿನ ಅಂಬಲಿ–ತುಂಬೇಸೊಪ್ಪೇ ನನಗೆ ಸಾಕು" ಎಂದು ಹೇಳುತ್ತಿದ್ದರು. ಕ್ಷಯರೋಗವು ಅವರ ದೇಹಶಕ್ತಿಯನ್ನೆಲ್ಲ ಕ್ರಮಕ್ರಮವಾಗಿ ತಿಂದುಹಾಕಿತು. ಅನಿವಾರ್ಯವಾದ ಸಾವನ್ನು ಹೇಗೆ ಎದುರಿಸಬೇಕೆಂಬುದನ್ನು ಅವರು ತೋರಿಸಿಕೊಟ್ಟರು. ಸ್ವತಂತ್ರವಾಗಿ ತಾವು ಓದುವುದು ಸಾಧ್ಯವಾಗದಿದ್ದಾಗ ತಮ್ಮ ಅನುಚರರಿಂದ ಉಪನಿಷತ್ತುಗಳು, ಭಾಗವತ, ಶ್ರೀರಾಮಕೃಷ್ಣ ವಚನವೇದ ಮುಂತಾದುವನ್ನು ಓದಿಸಿ ಕೇಳುತ್ತಿದ್ದರು. ಪರಮಹಂಸರನ್ನು ನೆನೆಯುತ್ತಲೇ ತಮ್ಮ ನೋವನ್ನೆಲ್ಲ ಮರೆಯುತ್ತಿದ್ದರು. ಕೊನೆಯ ಕ್ಷಣದವರೆಗೂ ಹರ್ಷಚಿತ್ತರಾಗಿಯೇ ಇದ್ದರು. "ಶ್ರೀರಾಮಕೃಷ್ಣರ ಕೃಪೆ ಈ ಮಹಾಸಂಘದ ಮೇಲೆ ಯಾವಾಗಲೂ ಇರಲಿ" ಎಂದು ಪ್ರಾರ್ಥಿಸಿದರು. "ಈ ಶರೀರವು ಸತ್ತರೇನೂ ಚಿಂತೆಯಿಲ್ಲ. ನಾನು ಸಂತೋಷದಿಂದ ನನ್ನ ಸದ್ಗುರುಗಳ ಬಳಿಗೆ ಹೋಗುತ್ತಿದ್ದೇನೆ, ನನಗೀಗ ಅವರು ಕಾಣಿಸಿಕೊಳ್ಳುತ್ತಿದ್ದಾರೆ" ಎಂದು ನಗೆಮೊಗವನ್ನು ಬೀರುತ್ತ ದೇಹಧಾರಿತೆಯಿಂದ ಇನ್ನಿಲ್ಲವಾಗಿಬಿಟ್ಟರು. ಅದು ೧೯೩೨ ಡಿಸೆಂಬರ್ ೨ನೆಯ ತಾರೀಖಾಗಿತ್ತು. ಗುರುಭಾಯಿಗಳು ವೇದಘೋಷ ಮಾಡುತ್ತ ಸುಬೋಧಾನಂದರ ಪಾರ್ಥಿವ ಶರೀರವನ್ನು ಗಂಧ ಪುಷ್ಪಾದಿಗಳಿಂದ ಅಲಂಕರಿಸಿ ಗಂಗಾನದಿಯ ಸಮೀಪದ ಬೇಲೂರುಮಠದ ಶ್ಮಶಾನಕ್ಕೆ ಕೊಂಡೊಯ್ದರು. ಕರ್ಪೂರ ಶ್ರೀಗಂಧ ಚಂದನಾದಿಗಳಿಂದ ಅವರ ಅಗ್ನಿಸಂಸ್ಕಾರವನ್ನು ನೆರವೇರಿಸಿದರು. ಸುಬೋಧಾನಂದರು ತಮ್ಮ ಬಾಳಿನ ಪರ್ಯಂತ ಮುಗ್ಧಶಿಶುವಿನಂತಿದ್ದು ನಿಷ್ಕಳಂಕ ದಿವ್ಯಜೀವನ ವನ್ನು ನಡೆಸಿದರು. ಅವರೊಬ್ಬ ಶುಕಮಹರ್ಷಿಯ ಹಾಗೆ. ಅವರನ್ನು ಸ್ಮರಿಸಿಕೊಂಡಾಗಲೆಲ್ಲ ಪುಟ್ಟಬಾಲಕನ ರೂಪದಲ್ಲಿ ದೊಡ್ಡ ಅನುಭಾವಿಯೊಬ್ಬರು ನಮ್ಮ ಕಣ್ಣಮುಂದೆ ಕಡೆದು ನಿಲ್ಲುತ್ತಾರೆ.

**ಸುಬೋಧ ವಚನಾಂಜಲಿ:** (೧) ಸಂನ್ಯಾಸವೆಂದರೆ ಸ್ವಾರ್ಥದ ಎಲ್ಲ ಉದ್ದೇಶಗಳನ್ನೂ ಆಸೆಗಳನ್ನೂ ತ್ಯಾಗಮಾಡುವುದೇ ಆಗಿದೆ. ಬ್ರಹ್ಮಚರ್ಯವು ಸಿದ್ಧಿಸದೆ ಸಂನ್ಯಾಸವಾಗಲಿ, ತ್ಯಾಗವಾಗಲಿ ಸಿದ್ಧಿಸುವುದಿಲ್ಲ. (೨) ಜಗನ್ಮಾತೆಯ ಕೃಪೆಯಿಲ್ಲದೆ ಯಾವ ಕಾರ್ಯವೂ ನೇರ್ಪಾಗುವುದಿಲ್ಲ; ಅವಳಿಗೆ ಶರಣಾದರೆ ನಮ್ಮ ದೌರ್ಬಲ್ಯಗಳನ್ನೂ ಕಾಮುಗಳನ್ನೂ ಕಿತ್ತುಹಾಕಿ ತಾನೇ ಮುನ್ನಡೆಸುತ್ತಾಳೆ. (೩) ಅವರು ಯಾವುದೇ ಜಾತಿಮತಪಂಥಕ್ಕೆ ಸೇರಿದ್ದರೂ ಸರಿಯೆ, ಶ್ರದ್ಧೆಯಿಂದ ಮಂತ್ರವನ್ನು ಪುರಶ್ಚರಣ ಮಾಡಿದರೆ, ಅದರ ಫಲವನ್ನು ಖಂಡಿತವಾಗಿಯೂ ಪಡೆಯುತ್ತಾರೆ. ರೈತನು ಬೀಜ ಬಿತ್ತಿದ್ದರೆ ಅದು ನೇರವಾಗಿ ಬಿದ್ದರೂ ತಲೆಕೆಳಕಾಗಿ ಬಿದ್ದರೂ ಮೊಳಕೆಯೊಡೆದು ಸಸ್ಯವು ಮೇಲೆದ್ದು ಬಂದೇ ತೀರುತ್ತದೆಯಲ್ಲವೆ! (೪) ನಾವು ಆಶಾವಾದಿಗಳಾಗಿರಬೇಕು. ನೊಂದವರಿಗೆ ನಮ್ಮ ಮಾತುಗಳಿಂದ ನಲಿವನ್ನೂ ಬಲವನ್ನೂ ತಂದುಕೊಡಬೇಕು. ಅವರನ್ನೂ ಆಶಾವಾದಿಗಳನ್ನಾಗಿ ಮಾಡಬೇಕು. (೫) ಸತ್ಯಶೀಲತೆಯೊಂದಿದ್ದರೆ ಸಾಕು, ನಮ್ಮ ಜೊತೆಗಾರರಾಗಿ ನಡೆದುಬರುತ್ತಿರುವವರಿಗಿಂತಲೂ ಸ್ಪಷ್ಟವಾಗಿ ಭಗವಂತನ ಇರುವಿಕೆಯನ್ನು ಸಾಕ್ಷಾತ್ಕರಿಸಿಕೊಳ್ಳಬಹುದು.

✶

**ಮಾನ್ಯ ಲೇಖಕರು ನಾಡಿನ ಪ್ರಸಿದ್ಧ ಸಮಾಜ ಸೇವಾ ಕಾರ್ಯಕರ್ತರಲ್ಲಿ ಒಬ್ಬರು. ಸಮಾನ ಮನಸ್ಕರಾದ ಇತರ ವೈದ್ಯರುಗಳ ಜೊತೆಗೂಡಿ, ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ವೈದ್ಯಕೀಯ ಮತ್ತು ಶೈಕ್ಷಣಿಕ ಸೇವಾಕಾರ್ಯಗಳೂ ಸೇರಿದಂತೆ ವಿವಿಧ ಬಗೆಯ ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. 'ವಿವೇಕಾನಂದ ಯೂಥ್ ಮೂವ್‌ಮೆಂಟ್' ಎಂಬ ಸಂಸ್ಥೆಯ ಅಡಿಯಲ್ಲಿ ಇವರು ಮತ್ತು ಇವರ ಸಹವರ್ತಿಗಳು ಸಾಧಿಸಿರುವುದು ಅಪಾರ. ಇವರು ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾದ ಬಗೆಯ ಆತ್ಮೀಯ ವಿವರಣೆಯೇ ಈ ಲೇಖನದ ವಸ್ತು.**



# ಸ್ವಾಮಿ ವಿವೇಕಾನಂದರು ನನ್ನ ಮೇಲೆ ಪ್ರಭಾವ ಬೀರಿದ್ದು ಹೇಗೆ?

**ಡಾ. ಆರ್. ಬಾಲಸುಬ್ರಮಣ್ಯಂ**

ಸ್ವಾಮಿ ವಿವೇಕಾನಂದರು ನನ್ನ ಜೀವನದ ಮೇಲೆ ಅಷ್ಟೊಂದು ಪ್ರಭಾವ ಬೀರಿದ್ದು ಹೇಗೆ ಎಂದು ಹಲವರು ನನ್ನನ್ನು ಕೇಳಿದ್ದಾರೆ. ನಾನದನ್ನು ಹೇಗೆ ವಿವರಿಸಲಿ? ಅವರು ನನಗೆ ಮೊದಲು ಪರಿಚಯವಾದ ಘಟನೆಯನ್ನು ತಿಳಿಸಲೆ ಅಥವಾ ಕಳೆದ ೨೯ ವರ್ಷಗಳ ಕಾಲ ಅವರ ವಿಚಾರಧಾರೆಯ ಜೊತೆ ನನ್ನ ಒಡನಾಟವನ್ನು ವಿವರಿಸಲೆ? ನಾನು ಬೆಂಗಳೂರಿನ ಎಂ.ಇ.ಎಸ್ ಕಾಲೇಜಿನಲ್ಲಿ ಪಿ.ಯು.ಸಿ ಓದುತ್ತಿದ್ದಾಗ ವಿವೇಕಾನಂದರು ನನ್ನ ಭಾಗಕ್ಕೆ ಅಲ್ಲಿ ತೂಗುಹಾಕಿದ್ದ ಗೋಡೆಯ ಮೇಲಿನ ಚಿತ್ರವಾಗಿದ್ದರು, ಅಷ್ಟೇ! ಅವರ ಚಿತ್ರದ ಕೆಳಗೆ, **"ಸ್ವಾಮಿ ವಿವೇಕಾನಂದ – ಭಾರತದ ಹಿಂದೂ ಸಂನ್ಯಾಸಿ"** ಎಂಬ ಅರ್ಥ ಕೊಡುವ ಇಂಗ್ಲಿಷ್‌ನ ಬರವಣಿಗೆ ಇತ್ತು. ಆ ಚಿತ್ರದ ಬಗ್ಗೆ ಅಥವಾ ಅದರಲ್ಲಿರುವ ವ್ಯಕ್ತಿಯ ಬಗ್ಗೆ ತಲೆ ಕೆಡಿಸಿಕೊಳ್ಳದೆ, ಅದರ ಕೆಳಗೆ ನಾನು ಅನೇಕ ಬಾರಿ ಓಡಾಡಿದ್ದುಂಟು. ಬಹಳ ಹಿಂದೆ ವಿವೇಕಾನಂದರ ಬಗ್ಗೆ ಶಾಲೆಯ ಪಠ್ಯಪುಸ್ತಕದಲ್ಲಿ ಓದಿದ್ದು ಬಿಟ್ಟರೆ ಅವರ ಬಗ್ಗೆ ನನಗೆ ಹೆಚ್ಚೇನೂ ಗೊತ್ತಿರಲಿಲ್ಲ.

ನಾನು ೧೯೮೨ ರಲ್ಲಿ ಪಿ.ಯು.ಸಿ. ಮುಗಿಸಿ, ಇಂಜಿನಿಯರಿಂಗ್ ಅಥವಾ ವೈದ್ಯಕೀಯ ವ್ಯಾಸಂಗ ಮಾಡಬೇಕೆಂದು ಹೊರಟೆ. ಐ. ಐ. ಟಿ. ಯಲ್ಲಿ ಪ್ರವೇಶ ದೊರೆಯದಿದ್ದಕ್ಕೆ ನನಗೆ ತುಂಬಾ ಬೇಸರವಾಗಿತ್ತು. ಕಡೆಗೆ ಬೆಂಗಳೂರಿನ BMS College Of Engineering ನಲ್ಲಿ Mechanical Engineering ಕೋರ್ಸನ್ನು ಆಯ್ಕೆ ಮಾಡಿಕೊಂಡೆ. ದುರದೃಷ್ಟವಶಾತ್ ಕಾಲೇಜಿನಲ್ಲಿ ನನಗೆ ಮೊದಲ ದಿನವೇ ವಿಪರೀತ ragging ಮಾಡಿಬಿಟ್ಟರು. ಅದು ಎಷ್ಟರ ಮಟ್ಟಿಗೆ ಇತ್ತೆಂದರೆ, ಮರುದಿನ ಕಾಲೇಜಿಗೆ ಹೋಗಲು ಕೂಡ ಧೈರ್ಯವಿರಲಿಲ್ಲ. ಆದರೆ ಮನೆಯಲ್ಲಿ ಸುಮ್ಮನೆ ಕೂರಲಾದೀತೇ?

ಮರುದಿನ ಅಳುಕಿನಿಂದಲೇ ಕಾಲೇಜಿನ ಕಡೆಗೆ ಹೊರಟೆ. ಕಾಲೇಜು ತಲುಪುತ್ತಿದ್ದಂತೆ ಭಯ ನನ್ನನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಟ್ಟಿತು. ಒಳಗೆ ಹೋಗದಿರಲು ನಿರ್ಧರಿಸಿ, ಮುಂದೇನು ಮಾಡಬೇಕೆಂದು ಆಲೋಚಿಸುತ್ತಿದ್ದಾಗ, ಹತ್ತಿರವೇ ಇದ್ದ ರಾಮಕೃಷ್ಣಾಶ್ರಮದ ಹಸಿರು, ಶಾಂತ ವಾತಾವರಣ ನನ್ನನ್ನು ಕೈಬೀಸಿ ಕರೆಯಿತು. ಪ್ರತಿದಿನ ಅಲ್ಲೇ ಸಮಯ ಕಳೆಯಲು ಪ್ರಾರಂಭಿಸಿದೆ. ಸುಮ್ಮನೆ ಕಾಲ ಕಳೆಯುತ್ತಿದ್ದ ನನ್ನನ್ನು ನೋಡಿದ ಇಬ್ಬರು ಸ್ವಾಮಿಗಳು ಕರೆದು ವಿಚಾರಿಸಿದರು. ಇನ್ನು ಮುಂದೆ ಕೆಲಸವಿಲ್ಲದೆ ಅಲ್ಲಿ ಕೂರುವುದಕ್ಕೆ ಆಗುವುದಿಲ್ಲ ಎಂದು ನನಗೆ ಮನವರಿಕೆಯಾಯಿತು. ಆದ್ದರಿಂದ ಅಲ್ಲೇ ಇದ್ದ ಗ್ರಂಥಾಲಯಕ್ಕೆ ತೆರಳಿ, ಸಮಯವನ್ನು ಕಳೆಯುವ ಉದ್ದೇಶದಿಂದ ಕುತೂಹಲಕ್ಕೆ ವಿವೇಕಾನಂದರ ಕೆಲವು ಪುಸ್ತಕಗಳನ್ನು ಓದಲು ಪ್ರಾರಂಭಿಸಿದೆ. ಓದುತ್ತಾ ಹೋದಂತೆ ವಿವೇಕಾನಂದರು ನನ್ನನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಟ್ಟರು! ಮುಂದಿನ